# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.2937/2015

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ:20.4.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಮಂಡ್ಯ ತಾಲ್ಲೂಕಿನ ಹೂಳೇನಹಳ್ಳಿ ಗ್ರಾಮಪಂಚಾಯತಿಯ ಹರಿಜನ ಮತ್ತು ವೀರಶೈವ ಜನಾಂಗದವರ ವಾಸದ ಮನೆಗಳ ನಡುವಿನ ಗ್ರಾಂತಣ ಜಾಗದ ಅತಿಕ್ರಮಣವನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು

*******

ಶ್ರೀ. ಕೃಷ್ಣಪ್ಪ, ಮಾಚಿಹಳ್ಳಿ ಗ್ರಾಮದ ನಿವಾಸಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಪಿಡಿಒ, ಹುಲ್ಲೇನಹಳ್ಳಿ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, (2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಮಂಡ್ಯ, (ಇನ್ನು ಮುಂದೆ ಕ್ರಮವಾಗಿ " 1 ಮತ್ತು 2ನೇ ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ಮಂಡ್ಯ ತಾಲ್ಲೂಕಿನ ಹೂಳೇನಹಳ್ಳಿ ಗ್ರಾಮಪಂಚಾಯತಿಯ ಹರಿಜನ ಮತ್ತು ವೀರಶೈವ ಜನಾಂಗದವರ ವಾಸದ ಮನೆಗಳ ನಡುವೆ ಗ್ರಾಂತಣ ಜಾಗವಿದ್ದು,ಸದರಿ ಜಾಗ ರಸ್ತೆಯ ಸಲುವಾಗಿ ಇಟ್ಟಿದ್ದು ಇರುತ್ತದೆ. ಸದರಿ ಜಾಗದಲ್ಲಿ ಎಂ.ಮಾದಯ್ಯ, ನಂಜಮ್ಮ, ಬಸವಯ್ಯ ಚನ್ನೂರಮ್ಮ, ಚನ್ನಪ್ಪ, ರಾಜ ಚಿಕ್ಕಣ್ಣ, ಮೋಟಪ್ಪ ಮತ್ತು ಶಿವಣ್ಣ ಎಂಬುವವರು ಅತಿಕ್ರಮಣ ಮಾಡಿ ರಸ್ತೆ ಜಾಗಕ್ಕೆ ಬೇಲಿ ಹಾಕಿಕೊಂಡು ಸಾರ್ವಜನಿಕರಿಗೆ ತಿರುಗಾಡುವುದಕ್ಕೆ ತುಂಬಾ ತೊಂದರೆಯುಂಟುಮಾಡಿರುತ್ತಾರೆ. ಸದರಿ ರಸ್ತೆಯ ಮೂಲಕ ಹರಿಜನ ಜನಾಂಗದವರಿಗೆ ಮಂಜೂರು ಮಾಡಿದ ಸ್ಮಶಾನಗಳಿಗೆ ಹೋಗುತ್ತಿದ್ದರು. ರಸ್ತೆ ಜಾಗವನ್ನು ಅತಿಕ್ರಮಣ ಮಾಡಿದ್ದರಿಂದ ಹರಿಜನ ಜನಾಂಗದವರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಕುರಿತು ಈ ಹಿಂದೆ ಇದೇ ಸಂಸ್ಥೆಯಲ್ಲಿ ದೂರು ಸಂಖ್ಯೆ: ಮೈ.1447/2006ನ್ನು ಜಿಲ್ಲಾ ಪಂಚಾಯತಿ ಮುಖ್ಯ

ಕಾರ್ಯದರ್ಶಿ, ಮಂಡ್ಯ, ಅವರ ವಿರುದ್ಧ ದಾಖಲು ಮಾಡಲಾಗಿತ್ತು. ಆ ಸಮಯದಲ್ಲಿ ಮಾನ್ಯ ಉಪಲೋಕಾಯುಕ್ತರು ಎದುರುದಾರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯದರ್ಶಿ, ಮಂಡ್ಯ, ಅವರಿಗೆ ಒತ್ತುವರಿ ತೆರವುಗೊಳಿಸಿ ರಸ್ತೆ ಮಾಡಿಕೊಡಬೇಕೆಂದು ನಿರ್ದೇಶನ ನೀಡಿ ಸದರಿ ಪ್ರಕರಣವನ್ನು ದಿ.5.8.2013ರಂದು ಮುಕ್ತಾಯಗೊಳಿಸಿದ್ದರು. ಮೇಲ್ಕಂಡ ಪ್ರಕರಣದಲ್ಲಿ ನಿರ್ದೇಶನ ನೀಡಿದಂತೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯದರ್ಶಿ,ಮಂಡ್ಯ, ಅವರು ಮಂಡ್ಯ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿ.22.9.2014ರಂದು ಪತ್ರ ಬರೆದು ವಿವಾದಿತ ಸ್ಥಳದಲ್ಲಿ ತಹಶೀಲ್ದಾರವರ ಮೂಲಕ ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸಿ ರಸ್ತೆ ಮಾಡಿಕೊಡಬೇಕೆಂದು ನಿರ್ದೇಶಿಸಿದ್ದರು. ಆದರೂ 1 ಮತ್ತು 2ನೇ ಎದುರುದಾರರು ಯಾವುದೇ ಆದೇಶವನ್ನು ಪಾಲಿಸದೆ ಪತ್ರ ವ್ಯವಹಾರ ಮಾಡುತ್ತಾ ವಿಳಂಬಮಾಡುತ್ತಿದ್ದಾರೆ. ಒತ್ತುವರಿ ಮಾಡಿದ ಪೈಕಿ 4 ಜನರು ಕ್ರಯಪತ್ರವನ್ನು ಸೃಷ್ಟಿಸಿ ಪಂಚಾಯತಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿರುತ್ತಾರೆ. 5 ಜನರ ಹೆಸರನ್ನು ಹಿಂದಿನ ಮಂಡಳ ಪಂಚಾಯತಿಯವರು ಯಾವುದೇ ಆದೇಶವಿಲ್ಲದೆ ದಾಖಲುಮಾಡಿರುತ್ತಾರೆ. ಎದುರುದಾರರು ಒತ್ತುವರಿಯನ್ನು ತೆರವುಗೊಳಿಸಲು ಯಾವದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರಿಗೆ ತಕ್ಷಣ ಕ್ರಮಕೈಗೊಳ್ಳಲು ಮರು ಆದೇಶ ನೀಡಬೇಕೆಂದು ದೂರು ಸಲ್ಲಿಸಿರುತ್ತಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ಉಳ್ಳೇನಹಳ್ಳಿ ಗ್ರಾಮ ಪಂಚಾಯತಿಯ ಗ್ರಾಂಠಾಣ ಜಾಗದ ಕುರಿತು 1995-96ನೇ ಸಾಲಿನಿಂದ ಹರಿಜನ ಮತ್ತು ವೀರಶೈವ ಜನಾಂಗದ ಮಧ್ಯ ತಂಟೆ ಪ್ರಾರಂಭವಾಗಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯಲ್ಲಿ ಯಾವುದೇ ದಾಖಲೆಗಳು/ಮಾಹಿತಿ ಲಭ್ಯವಿರುವುದಿಲ್ಲ. ದಿ.16.7.1998ರಂದು ನಡೆದ ಉಳ್ಳೇನಹಳ್ಳಿ ಗ್ರಾಮ ಪಂಚಾಯತಿ ಸಭೆಯಲ್ಲಿ ಹರಿಜನ ಮತ್ತು ವೀರಶೈವ ಜನಾಂಗದ ನಡುವೆ ಇರುವ ರಸ್ತೆ ಹಾಲಿ ಕೆಲವು ಗ್ರಾಮಸ್ಥರುಗಳು ಬೇಲಿ ಹಾಕಿಕೊಂಡು ಸಾರ್ವಜನಿಕರಿಗೆ ತಿರುಗಾಡುವುದಕ್ಕೆ ತುಂಬಾ ತೊಂದರೆಯಾಗಿದ್ದು, ಇದನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಂಡು ಗ್ರಾಮಸ್ಥರ ಒಂದು ಸಭೆಯನ್ನು ಕರೆದು ತೀರ್ಮಾನ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ ಹಾಗೂ ಬೇಲಿಹಾಕಿಕೊಂಡವರಿಗೆ ನೋಟೀಸು ಜಾರಿ ಮಾಡಲು ತೀರ್ಮಾನಿಸಿ ಅದರಂತೆ ನೋಟೀಸು ನೀಡಿ ದಾಖಲೆ ಹಾಜರುಪಡಿಸಲು ಸೂಚಿಸಲಾಗಿತ್ತೆಂದು ಹೇಳಿರುತ್ತಾರೆ. 9 ಜನರಲ್ಲಿ 4 ಜನ ಮಾತ್ರ

ದಾಖಲೆಗಳನ್ನು ಹಾಜರುಪಡಿಸಿ ತಮಗೆ ಸ್ವತ್ತುಬಂದ ಬಗ್ಗೆ ಕ್ರಯಪತ್ರದ ದಾಖಲೆಗಳನ್ನು ಒದಗಿಸಿರುತ್ತಾರೆ. ಉಳಿದವರಿಗೆ ಸ್ವತ್ತು ಹಿಂದಿನ ಮಂಡಲ ಪಂಚಾಯತಿಯಿಂದಲೂ ಕರನಿರ್ಧರಣೆಯಲ್ಲಿದ್ದು, ಇದರಲ್ಲಿ ಚೆಕ್ ಬಂದಿ ಹಾಗೂ ಅಳತೆಗಳು ನಿರ್ದಿಷ್ಟವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಶಿವಪ್ಪ ಬಿನ್ ಚಿಕ್ಕದೇವಯ್ಯ ಎನ್ನುವವರು ದಿ.13.11.1988ನೇ ಸಾಲಿನಲ್ಲಿ ಕ್ರಯಪತ್ರದಂತೆ ಪಂಚಾಯತಿಯಿಂದ ಮನೆ ಕಟ್ಟಲು ಲೈಸೆನ್ಸ್ ಪಡೆದಿದ್ದರು. ಸದರಿ ಲೈಸೆನ್ಸಿನ ಕ್ರಮಬದ್ಧತೆಯನ್ನು ದೂರುದಾರ ಕೃಷ್ಣಪ್ಪ ಅವರು ಪಂಚಾಯತ್ ರಾಜ್ ಅಧಿನಿಯಮ 93 ಪ್ರಕರಣ 269ರಂತೆ ಕಾರ್ಯನಿರ್ವಾಹಕ ಅಧಿಕಾರಿಗಳಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಸದರಿ ಪ್ರಕರಣದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಶಿವಪ್ಪ ಬಿನ್ ಚಿಕ್ಕದೇವಯ್ಯ ಶಿವಯಪ್ಪ ಅವರಿಗೆ ಮನೆ ಕಟ್ಟಲು ನೀಡಿದ ಲೈಸೆನ್ಸ್ ರದ್ದುಪಡಿಸಿ ಅವರ ಮನೆಯನ್ನು ಕಟ್ಟಲು ಉದ್ದೇಶಿಸಿರುವ ಜಾಗದ ಮುಂದೆ ಹಿಂದೆ ಇರುವಂತೆ 17 ಅಡಿ ರಸ್ತೆಯನ್ನು ಬಿಟ್ಟು ಮನೆಯ ಸುತ್ತ ಸಹ 3 ಅಡಿ ಬಿಟ್ಟುಕೊಂಡು ಕಟ್ಟಡ ನಿರ್ಮಿಸಲು ಹೊಸ ಲೈಸೆನ್ಸ್ ನೀಡಲು ತಿಳಿಸಿದ್ದರು. ಅದರಂತೆ ಸದರಿಯವರು ಮಾಡಿದ ಅತಿಕ್ರಮಣವನ್ನು ತೆರವುಗೊಳಿಸಿ 17 ಅಡಿಗಳಿಗೆ ರಸ್ತೆಯನ್ನು ವಿಸ್ತರಿಸಿ ಮಣ್ಣು ರಸ್ತೆ ನಿರ್ಮಿಸಿರುತ್ತಾರೆಂದು ತಿಳಿಸಿರುತ್ತಾರೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದಂತೆ ಮತ್ತು ಪಿಡಿಒ ಅವರ ಕೋರಿಕೆಯಂತೆ ತಾಲ್ಲೂಕು ಪಂಚಾಯತಿ ಕಛೇರಿಯ ತಾಂತ್ರಿಕ ಸಿಬ್ಬಂದಿ ಹಾಗೂ ಪಿಡಿಒ ಅವರಿಂದ 2 ಜನಾಂಗದ ನಡುವೆ ಇರುವ ವಿವಾದಿತ ಸ್ವತ್ತನ್ನು ಸೇರಿಸಿ ವಾಸ್ತವದ ಬಗ್ಗೆ ನಕ್ಷೆ ತಯಾರಿಸಲಾಗಿದೆ. ಸದರಿ ನಕ್ಷೆಯಲ್ಲಿ ಸಾರ್ವಜನಿಕರು ತಿರುಗಾಡಲು ಬಳಸುತ್ತಿರುವ ರಸ್ತೆಯನ್ನು ಹಾಗೂ ವಿವಾದಿತ ದೂರುದಾರರ ರಸ್ತೆ ಎಂದು ತೋರಿಸಿರುವ ಜಾಗವನ್ನು ಕೂಡ ಗುರುತಿಸಲಾಗಿರುತ್ತದೆಂದು ತಿಳಿಸಿರುತ್ತಾರೆ. ಒಟ್ಟಾರೆ 2 ಜನಾಂಗದವರ ಮಧ್ಯೆ ತಿರುಗಾಡಲು ರಸ್ತೆಗಳಿದ್ದು, ವಿವಾದಿತ ಸ್ವತ್ತಿನ ಮಧ್ಯೆ ರಸ್ತೆ ನಿರ್ಮಿಸಲು ದಾಖಲೆಗಳ ಕೊರತೆ ಇರುವುದೆಂದು ತಿಳಿಸಿರುತ್ತಾರೆ.

ಆಕ್ಷೇಪಣೆಯ ಜೊತೆಗೆ ಎದುರುದಾರರು ಪಂಚಾಯತಿಯ ಸಾಮಾನ್ಯಸಭೆಯ ನಡವಳಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಯವರು ನೀಡಿದ ನೋಟೀಸು, ತಾಂತ್ರಿಕ ವಿಭಾಗದವರು ಮತ್ತು ಪಿಡಿಒ ಸೇರಿ ವಿವಾದಿತ ಜಾಗವನ್ನು ಸರ್ವೆ ಮಾಡಿ ತಯಾರಿಸಿದ ನಕ್ಷೆಯನ್ನು ಹಾಗೂ ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ಎದುರುದಾರರ ವಿರುದ್ಧ ಕ್ರಮಕೈಗೊಳ್ಳಲು ಕೋರಿ, ಪ್ರತ್ಯುತ್ತರದ ಜೊತೆಗೆ ಅತಿಕ್ರಮಣದಾರರ

N. Ananth

ಕ್ರಯಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಹಾಗೂ ಪಂಚಾಯತಿ ನಡವಳಿಯ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

5. ಈ ಪ್ರಕರಣದಲ್ಲಿ ದಾಖಲಾದ ದೂರು, ಆಕ್ಷೇಪಣೆ, ಪ್ರತ್ಯುತ್ತರ, ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ವಿವಾದಿತ ಜಾಗ ಕುಳ್ಳೇನಹಳ್ಳಿ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಂಠಣ ಜಾಗವಾಗಿರುತ್ತದೆಂದು ತಿಳಿದುಬರುತ್ತದೆ. ಎದುರುದಾರರು ಸದರಿ ವಿವಾದಿತ ಜಾಗದ ಬಗ್ಗೆ ಪಂಚಾಯತಿಯಲ್ಲಿ ಯಾವುದೇ ದಾಖಲೆಗಳಿರುವುದಿಲ್ಲವೆಂದು ತಿಳಿಸಿರುತ್ತಾರೆ. ಗ್ರಾಂಠಣ ಜಾಗದಲ್ಲಿ ಯಾವ್ಯಾವ ಆಸ್ತಿಗಳಿಗೆ ದಾಖಲೆ ಇರುವುದಿಲ್ಲ, ಸದರಿ ಆಸ್ತಿಗಳು ಪಂಚಾಯತಿಗೆ ಸೇರುತ್ತವೆ. ಕಾರಣ ಎದುರುದಾರರು ವಿವಾದಿತ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿ ಅಥವಾ ಮಾಹಿತಿ ಇರುವುದಿಲ್ಲವೆಂದು ಹೇಳುವುದು ಸರಿಯಿರುವುದಿಲ್ಲ. ಎದುರುದಾರರು ಜವಾಬ್ದಾರಿಯುತ ಪಂಚಾಯತಿ ಅಧಿಕಾರಿಗಳಾಗಿರುವುದರಿಂದ ಪಂಚಾಯತಿ ಆಸ್ತಿಯನ್ನು ರಕ್ಷಣೆ ಮಾಡುವುದು ಎದುರುದಾರರ ಕರ್ತವ್ಯವಾಗಿರುತ್ತದೆ. 4 ಜನ ಹಾಜರುಪಡಿಸಿದ ಕ್ರಯಪತ್ರಗಳ ನೈಜತೆಯ ಬಗ್ಗೆ ಎದುರುದಾರರು ಕೂಲಂಕುಷವಾಗಿ ಪರಿಶೀಲಿಸಬೇಕಾಗುತ್ತದೆ. ದೂರುದಾರರು ಸದರಿ ಕ್ರಯಪತ್ರಗಳು ಸೃಷ್ಟಿ ಮಾಡಿದ ಕ್ರಯಪತ್ರಗಳೆಂದು ಹೇಳಿದಾಗ ಸದರಿ ಕ್ರಯಪತ್ರದಲ್ಲಿ ತಿಳಿಸಿದ ಮಾರಾಟಗಾರರಿಗೆ ಸಂಬಂಧಪಟ್ಟ ಜಾಗ ಅಥವಾ ಆಸ್ತಿ ಹೇಗೆ ಬಂದಿತೆಂದು ಎದುರುದಾರರು ವಿಚಾರಿಸಬೇಕಾಗುತ್ತದೆ. ಆದರೆ ಈ ಬಗ್ಗೆ ಎದುರುದಾರರು ಯಾವುದೇ ವಿಚಾರಣೆ ಮಾಡಿರುವುದಿಲ್ಲ. 5 ಜನರಿಗೆ ಮಂಡಲ ಪಂಚಾಯತಿಯವರು ಕರನಿರ್ಧರಣೆಯನ್ನು ಮಾಡಿ ಸದರಿ ಆಸ್ತಿಗಳಿಗೆ ಖಾತೆ ಮಾಡಿರುತ್ತಾರೆ. ಆದರೆ ಕರನಿರ್ಧರಣೆ ಆಧಾರದ ಮೇಲೆ ಗ್ರಾಂಠಣ ಆಸ್ತಿಗೆ ಸದರಿ 5 ಜನ ವ್ಯಕ್ತಿಗಳು ಹಕ್ಕುದಾರರಾಗಿರುವುದಿಲ್ಲ. ಗ್ರಾಂಠಣ ಆಸ್ತಿ ಕೊಡಬೇಕಾದರೆ ಮೇಲಾಧಿಕಾರಿಗಳಿಂದ ಆದೇಶ ಬೇಕಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ದೂರಿನಲ್ಲಿ ಹೇಳಿದ 9 ಜನರು ಗ್ರಾಂಠಣ ಆಸ್ತಿಯಲ್ಲಿ ಅತಿಕ್ರಮಣ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಎದುರುದಾರರು ಸದರಿ ಅತಿಕ್ರಮಣವನ್ನು ತೆರವುಗೊಳಿಸಲು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ದೂರಿನ ಜೊತೆಗೆ ಈ ಹಿಂದಿನ ಪ್ರಕರಣ ಎಂ.ವೈ.ಎಸ್.1447/2006 ರ ಆದೇಶ ಪುಟದ ನಕಲನ್ನು ಹಾಜರುಪಡಿಸಿರುತ್ತಾರೆ. ಸದರಿ ಆದೇಶದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿ, ಮಂಡ್ಯ ಅವರಿಗೆ ವಿವಾದಿತ ಜಮೀನು ಜಾಗದ

N. Ananda

ಸರ್ವೆ ಮಾಡಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ಸದರಿ ನಿರ್ದೇಶನದಂತೆ ಕ್ರಮಕೈಗೊಳ್ಳಲು ಎದುರುದಾರರಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಯವರು ದಿ.22.9.2014ರಂದು ಪತ್ರ ಬರೆದು ಸೂಚನೆ ನೀಡಿರುತ್ತಾರೆ. ಆದರೂ ಸಹ ಎದುರುದಾರರು ಯಾವುದೇ ಕ್ರಮಕೈಗೊಳ್ಳದೇ, ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಮಂಡ್ಯ ತಾಲ್ಲೂಕಿನ ಹೊಳೇನಹಳ್ಳಿ ಗ್ರಾಮಪಂಚಾಯತಿಯ ಹರಿಜನ ಮತ್ತು ವೀರಶೈವ ಜನಾಂಗದವರ ವಾಸದ ಮನೆಗಳ ನಡುವಿನ ಗ್ರಾಂಠಣ ಜಾಗದ ಅತಿಕ್ರಮಣವನ್ನು **ತೆರವುಗೊಳಿಸಲು** ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

(ನ್ಯಾಯಮೂರ್ತಿ ಎಸ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.